**<u>ಸಾಕ್ಷಿಯನ್ನು ದಿನಾಂಕ 21-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎಂ.ಡಿ.ಕೆ ವಕೀಲರಿಂದಃ</u>**

1. ನಾನು ವಾದಿಯ ಆಸ್ತಿಯಲ್ಲಿ ಅಕ್ರಮವಾಗಿ ಕಟ್ಟುತ್ತಿರುವ ಕಟ್ಟಡವನ್ನು ತಕ್ಷಣ ತೆರವು ಮಾಡಬೇಕೆಂದು ನಗರ ಸಭೆಯವರು ದಿನಾಂಕ 17.06.2021 ರಂದು ನಿ.ಪಿ.–15 ರಂತೆ ನನಗೆ ನೋಟಿಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ನಂತರ ನಗರ ಸಭೆ ಅಧಿಕಾರಿಗಳು ವತ ಸರ್ವೆಯವರು ಬಂದು ಸರ್ವೆ ನಂಬರ್ 92 ಮತ್ತು 93 ರ ಆಸ್ತಿಗಳು ಎಲ್ಲಿದೆ ಎಂಬ ಬಗ್ಗೆ ಸ್ಥಳ ಪರಿಶೀಲನೆ ಮಾಡಿದರು ಎಂದರೆ ಸರಿ. ಸ್ಥಳ ಪರಿವೀಕ್ಷಣೆ ನಂತರ ಸರ್ವೆ ನಂಬರ್ 92 ಮತ್ತು 93 ರ ಆಸ್ತಿಗಳು ಸರ್ಕಾರಿ ಜಾಗ ಅಲ್ಲ ಮತ್ತು ಸದರಿ ಜಮೀನನ್ನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ವರದಿ ಕೊಟ್ಟರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಿಷಯ ಗೊತ್ತಿದ್ದರೂ ಒತ್ತುವರಿ ಮಾಡಿರುವ ವಾದಿಯ ಆಸ್ತಿ ಬಿಟ್ಟು ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಈಗ ವಾಸವಿರುವ ಮನೆಯನ್ನು ವಾದಿಗೆ ಸೇರಿದ ಆಸ್ತಿಯಲ್ಲಿ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿ ಅದು ನನ್ನದು ಎಂದು ಈಗ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಗೌಸ್ ಖಾನ್ ಖರೀದಿ ಮಾಡಿದ ಸ್ವತ್ತು ಮತ್ತು ವಾದಿ ಸದರಿ ಗೌಸ್ ಖಾನ್ ರಿಂದ ಖರೀದಿ ಮಾಡಿದ ಚಕ್ಕುಬಂಧಿ ನನಗೆ ಗೊತ್ತಿಲ್ಲ. ಹಕ್ಕು ಪತ್ರದ ಚಕ್ಕುಬಂಧಿಯಲ್ಲಿ ದಕ್ಷಿಣಕ್ಕೆ ಮಟ್ಟನ್ ಶಾಪ್ ಇದೆ ಎಂದು ನಿಮ್ಮ ಪ್ರಮಾಣ

ಪತ್ರದಲ್ಲಿ ಬರಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ವಾದಿಗೆ ಸಂಬಂಧಪಟ್ಟ ಹಕ್ಕು ಪತ್ರ ಮತ್ತು ಕ್ರಯ ಪತ್ರಗಳಲ್ಲಿ ನಮೂದಿಸಲಾಗಿರುವ ಚಕ್ಕುಬಂಧಿಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಗಳನ್ನು ಯಾವಾಗ ನೋಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಈ ಹಿಂದೆ ಗೌಸ್ ಖಾನ್ ರವರು ಹಣದ ಅಗತ್ಯವಿದ್ದರಿಂದ ನನ್ನ ತಂದೆಯಿಂದ ಸಾಲ ಪಡೆದು ಮೂಲ ಹಕ್ಕು ಪತ್ರವನ್ನು ಅವರ ಬಳಿ ಕೊಟ್ಟಿದ್ದರು ಮತ್ತು ಆಗ ನಾನು ಸದರಿ ದಾಖಲೆಯನ್ನು ನೋಡಿದ್ದೇನೆ ಎನ್ನುತ್ತಾರೆ. ಸದರಿ ಮೂಲ ಹಕ್ಕು ಪತ್ರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ತೊಂದರೆ ಇರುವುದಿಲ್ಲ. ಮೂಲ ಹಕ್ಕು ಪತ್ರ ನನ್ನ ಬಳಿ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು ಅಕ್ರಮವಾಗಿ ಒತ್ತುವರಿ ಮಾಡಿರುವ ದಾವಾಸ್ತಿಯನ್ನು ವಾದಿಗೆ ಬಿಟ್ಟುಕೊಡಲು ನಾನು ಬಾದಸ್ಥ ಎಂದರೆ ಸರಿಯಲ್ಲ. ನನ್ನ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಹೇಳಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**